**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1607/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಡಾ.ಚಂದ್ರಶೇಖರ್ ಜೆ.ಪಿ. | ಫಾಸಾ-6 |
| ತಂದೆಯ ಹೆಸರು | : ಪುಟ್ಟಪ್ಪ | ಚಾಸಾ-10 |
| ವಯಸ್ಸು | : 50 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಹಿರಿಯ ತಜ್ಞರು | ದಿನಾಂಕಃ 04.11.2025. |
| ವಾಸಸ್ಥಳ | : ಮೂಡಿಗೆರೆ ಸರ್ಕಾರಿ ಆಸ್ಪತ್ರೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞಾಸ.ಸ.ಅ. ರವರಿಂದ:**

ನಾನು ದಿ.13.04.2022 ರಿಂದ ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಹಿರಿಯ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.14.01.2023 ರಂದು ಬೆ.9.50 ರ ಸಮಯಕ್ಕೆ ಕರ್ತವ್ಯದಲ್ಲಿ ಇದ್ದಾಗ ಚಾಸಾ-2 ರವರು ಹಲ್ಲೆಗೆ ಒಳಗಾದ ಬಗ್ಗೆ ಚಿಕಿತ್ಸೆಗೆಂದು ಹಾಜರಾಗಿದ್ದು ನಾನು ಅವರನ್ನು ಪರೀಕ್ಷಿಸಿದಾಗ ಅವರ ಎಡಕೈನ ಮೇಲೆ 2x1 ಸೆ.ಮೀ ನಷ್ಟು ತರಚಿದ ಗಾಯ ಕಂಡುಬಂತು ಹಾಗೂ ಸದರಿ ಸ್ಥಳದಲ್ಲಿ ಮೂಳೆಮುರಿತಕ್ಕೊಳಗಾಗಿರುವುದು ತಿಳಿದುಬಂತು. ನಂತರ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಕಳುಹಿಸಿಕೊಟ್ಟಿದ್ದು ಮಂಗಳೂರಿನ ತೇಜಸ್ವಿನಿ ಆಸ್ಪತ್ರೆಯ ಡಿಸ್ ಚಾರ್ಜ್ ಸಮ್ಮರಿಯಂತೆ ಚಾಸಾ-2 ರವರು ಸದರಿ ಮೂಳೆ ಮುರಿತದ ಸಂಬಂಧ ಶಸ್ತ್ರ ಚಿಕಿತ್ಸೆಗೆ ಪಡೆದಿರುವುದು ತಿಳಿದುಬಂತು. ನನ್ನ ಪ್ರಕಾರ ಚಾಸಾ-2 ರವರಿಗೆ ಆದ ಗಾಯ ಗಂಭೀರ ಸ್ವರೂಪದ್ದಾಗಿದ್ದು ಈ ಸಂಬಂಧ ಈಗ ನೋಡುತ್ತಿರುವ ಗಾಯದ ಪ್ರಮಾಣಪತ್ರವನ್ನು ನಾನು ನೀಡಿದ್ದು, ಅದರಲ್ಲಿನ ಸಹಿ ನನ್ನದೆ. ಗಾಯದ ಪ್ರಮಾಣಪತ್ರವನ್ನು ನಿಪಿ-16, ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.

ದಿ.18.03.2023 ರಂದು ಮೂಡಿಗೆರೆ ಪೋಲಿಸರು ನನ್ನ ಸಮಕ್ಷಮ ಒಂದು ದೊಣ್ಣೆಯನ್ನು ಹಾಜರುಪಡಿಸಿ ಅದರಿಂದ ಹೊಡೆದರೆ ಚಾಸಾ-2 ರವರಿಗೆ ಆದ ಗಾಯದ ಸಂಬವದ ಕುರಿತು ಅಭಿಪ್ರಾಯ ವರದಿ ನೀಡುವಂತೆ ಕೋರಿದ್ದು ಅದರಂತೆ ನಾನು ಸದರಿ ದೊಣ್ಣೆಯಿಂದ ಹೊಡೆದರೆ ಸದರಿ ಗಾಯ ಆಗುವ ಸಾಧ್ಯತೆ ಇದೆ ಎಂದು ವರದಿ ನೀಡಿರುತ್ತೇನೆ. ಸಾಕ್ಷಿಯು ದಿ.09.03.2023 ರ ಪತ್ರ, ದಿ.18.03.2023 ರ ಅಭಿಪ್ರಾಯ ವರದಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-17 ಮತ್ತು 18, ಸಾಕ್ಷಿಯ ಸಹಿಗಳನ್ನು ನಿಪಿ-17(ಎ) ಮತ್ತು 18(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಎಂ.ಒ.1 ನ್ನು ನೋಡಿ ನಿಪಿ-18 ರ ವರದಿ ನೀಡುವ ಕಾಲಕ್ಕೆ ಅದನ್ನು ಪರಿಶೀಲಿಸಿದ್ದೆ ಎಂದು ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಜಿ.ಎಸ್. ವಕೀಲರಿಂದಃ**

ನಾನು ಆರ್ಥೋಪೀಡಿಕ್ ಸರ್ಜನ್ ಅಲ್ಲ ಎಂದರೆ ಸರಿ. ಗಾಯದ ಪ್ರಮಾಣಪತ್ರವನ್ನು ನೀಡುವಂತೆ ದಿ.07.03.2023 ರಂದು ಮನವಿ ಪತ್ರ ಸಲ್ಲಿಸಿಕೊಂಡಿದ್ದರು. ದಿ.06.01.2023 ರಂದು ನಾನು ಪೋಲಿಸರಿಗೆ ಪ್ರಕರಣದ ಸಂಬಂಧ ಗಾಯದ ಪ್ರಮಾಣಪತ್ರ ಕೊಟ್ಟಿಲ್ಲ. ಚಾಸಾ-2 ರವರನ್ನು ಪರೀಕ್ಷಿಸಿದಾಗ ಅವರ ಕೈಯಲ್ಲಿ ರಕ್ತ ಬರುತಿದ್ದು ಅವರು ಧರಿಸಿದ್ದ ಬಟ್ಟೆಗೆ ರಕ್ತ ತಾಗಿತ್ತ ಎಂದು

ನಾನು ಗಮನಿಸಿಲ್ಲ. ಎಂ.ಒ.1 ನ್ನು ನನ್ನ ಸಮಕ್ಷಮ ಹಾಜರುಪಡಿಸಿದ್ದಾಗ ಅದನ್ನು ಸೀಲು ಮಾಡಲಾಗಿತ್ತು. ಎಂ.ಒ.1 ರ ಮೇಲೆ ಯಾವುದೇ ವಿಶೇಷ ಗುರುತು ಇರಲಿಲ್ಲ. ಎಂ.ಒ.1 ನ್ನು ನಾನು ನೋಡುವಾಗ ಅದಕ್ಕೆ ಕೆಲವು ಭಾಗದಲ್ಲಿ ತೊಗಟೆ ಇತ್ತು. ಯಾರಾದರು ಏಕಾಏಕಿ ಜಾರಿ ಗಟ್ಟಿಯಾದ ವಸ್ತುವಿನ ಮೇಲೆ ಬಿದ್ದರೆ ಚಾಸಾ-2 ರವರಿಗೆ ಆದಂತಹ ಗಾಯ ಆಗುವ ಸಾಧ್ಯತೆ ಇದೆ ಎಂದರೆ ಇರಬಹುದು. ಡಿಸ್ ಚಾರ್ಜ್ ಸಮ್ಮರಿಯನ್ನು ನೋಡಿದ ನಂತರ ನಾನು ಗಾಯದ ಪ್ರಮಾಣಪತ್ರ ನೀಡಿದ್ದೇನೆ. ಪೋಲಿಸರಿಗೆ ಸಹಾಯ ಮಾಡಲು ನಿಪಿ-16 ಮತ್ತು 18 ರ ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.